ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,

ದೇವದುರ್ಗ.

**CC No.619/2023**

**CW-1 PW-1**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಅಣ್ಣಾ ಶಾಲಂ ನಾಯಕ |
| ತಂದೆ/ಗಂಡ | ಃ | ಖಾಜನಾಯಕ |
| ವಯಸ್ಸು | ಃ | 33 |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಹನುಮಪೂರು |
| ಪ್ರಮಾಣಿಕರಿಸಿದ ದಿನಾಂಕ | ಃ | **20-11-2025** |

ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.

ಚಾಸಾ-4 ನನ್ನ ತಮ್ಮ, ಚಾಸಾ-5 ಮತ್ತು 6 ಅಣ್ಣನ ಮಕ್ಕಳು, ಚಾಸಾ-2, 3 ಮತ್ತು 7 ಗೊತ್ತು. ಆರೋಪಿತರು ಸಂಬಂಧಿಗಳು.

ದಿನಾಂಕ 04.04.2004 ರಂದು ರಾಯಕುಂಪಿ ಗ್ರಾಮದ ಸ.ನಂ.163 ರಲ್ಲಿ ಆರೋಪಿತರು ಕುಂಟೆ ಹೊಡೆಯುತ್ತಿದ್ದಾರೆ ಎಂದು ಚಾಸಾ-7 ರವರು ಬೆಳಿಗ್ಗೆ 11 ಗಂಟೆಗೆ ಫೋನ್ ಮಾಡಿದ್ದು ಆಗ ನಾನು ಮತ್ತು ಚಾಸಾ-4 ರಿಂದ 6 ರವರು ಸ್ಥಳಕ್ಕೆ ಹೋಗಿರುತ್ತೇವೆ. ಆಗ ನಾನು ಮಹ್ಮದ್ ಸಾಬನನ್ನು ಕುಳಿತು ಮಾತನಾಡೋಣ ಅಂತ ಅಂದಾಗ ಮಹ್ಮದ್ ಸಾಬ ನಿಮ್ಮ ಜೊತೆ ಏನು ಮಾತನಾಡುವುದು ಅಂತ 1 ನೇ ಆರೋಪಿ ಕಟ್ಟಿಗೆಯಿಂದ ನನ್ನ ತಮ್ಮನಿಗೆ ಚಾಸ-4 ರವರಿಗೆ ತಲೆಗೆ ಹೊಡೆದು ರಕ್ತಗಾಯ ಮಾಡಿರುತ್ತಾನೆ. 2 ನೇ ಆರೋಪಿ ಶಂಶುದ್ದೀನ್ ಮೂಗಿಗೆ ಗುದ್ದಿದಾಗ ಮೂರ್ಛೆ ಹೋಗಿರುತ್ತಾನೆ. ನನಗೆ ಇಸ್ಮಾಯಿಲ್ ಮತ್ತು ಬಾಬು ಬಂದು ಹೊಡೆದು ಜೀವದ ಬೆದರಿಕೆ ಹಾಕಿರುತ್ತಾರೆ. ರಾಯಚೂರಿನ ರಿಮ್ಸ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇವೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಹೈದ್ರಾಬಾದ ಆಸ್ಪತ್ರೆಗೆ ಹೋಗಿರುತ್ತೇವೆ. ಚಿಕಿತ್ಸೆ ಪಡೆದ ನಂತರ ಠಾಣೆಗೆ ಬಂದು 2 ದಿನಗಳ ನಂತರ ದೂರು ನೀಡಿರುತ್ತೇನೆ. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ದೂರು ನೀಡಿದ 2 ದಿನಗಳ ನಂತರ ಪೋಲಿಸರು ಮಧ್ಯಾಹ್ನ 2 ರಿಂದ 3 ಗಂಟೆವರೆಗೆ ನಾನು ತೋರಿಸಿದ ಘಟನ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಮಾಡಿ ಕಲ್ಲು ಮತ್ತು ಕಟ್ಟಿಗೆಯನ್ನು ಜಪ್ತಿ ಮಾಡಿಕೊಂಡಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ

ಕಲ್ಲು ಮತ್ತು ಕಟ್ಟಿಗೆಯನ್ನು ಮುಮಾ-1 ಮತ್ತು 2 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ **SP** ವಕೀಲರಿಂದ

ನನಗೆ ಓದಲು ಬರೆಯಲು ಬರುವುದಿಲ್ಲ. ಠಾಣೆಗೆ ಹೋಗಿ ದೂರನ್ನು ನೀಡಿಲ್ಲ. ಠಾಣೆಗೆ ನಾನು ಚಾಸಾ-4 ರಿಂದ 6 ರವರ ಹೋಗಿರುತ್ತೇವೆ. ನಾನು ಠಾಣೆಗೆ ಲಿಖಿತ ದೂರನ್ನು ನೀಡಿಲ್ಲ ಬೇರೆಯವಂದ ದೂರನ್ನು ಕೊಟ್ಟು ಬರಿಸಿರುವುದಿಲ್ಲ. ಠಾಣೆಯಲ್ಲಿ ನಾನು ಸಹಿ ಮಾಡಿದ ಹಾಳೆ ಖಾಲಿ ಹಾಳೆ ಆಗಿತ್ತು. ಸ.ನಂ.163 ನನ್ನ ತಂದೆ ಹೆಸರಿನಲ್ಲಿ ಇರುತ್ತದೆ. ಸದರಿ ಜಮೀನಿನ ಪಹಣಿಯನ್ನು ಠಾಣೆಗೆ ನೀಡಿರುವುದಿಲ್ಲ. ಆರೋಪಿತರು ಮಾತ್ರ ಜಮೀನಿಗೆ ಕುಂಟೆ ಹೊಡೆಯಲು ಬಂದಿದ್ದು ಸದರಿ ವಿಷಯವನ್ನು ಗ್ರಾಮದ ಮುಖ್ಯಸ್ಥರಿಗೆ ತಿಳಿಸಿಲ್ಲ. 8 ನೇ ಆರೋಪಿ ಫಾತೀಮಾ ನನ್ನ ಹೆಂಡತಿ. ಫಾತೀಮಾಳನ್ನು ಎಷ್ಟು ವರ್ಷಗಳ ಹಿಂದೆ ಮದುವೆ ಆಗಿರುತ್ತೇನೆ ನನಗೆ ಗೊತ್ತಿಲ್ಲ. ನನ್ನ ಮೊದಲನೇ ಮಗಳ ಹೆಸರು ಮುಸ್ಕಾನ, 2 ನೇ ಮಗನ ಹೆಸರು ಮಹ್ಮದ್ ಅಲಿ, 3 ನೆ ಮಗಳು ಸಹನಾ ಅಂತ ಇರುತ್ತಾಳೆ. ಘಟನೆ ನಡೆಯುವ 8-10 ವರ್ಷಗಳ ಮೊದಲಿನಿಂದಲೂ ನಾನು ನನ್ನ ಹೆಂಡತಿ ಮಕ್ಕಳು ನನ್ನ ಹೆಂಡತಿ ತವರು ಮನೆಯಲ್ಲಿ ಇದ್ದೆವು ಎಂದರೆ ಸರಿ. ನಾನು ಸಾರಾಯಿ ಸೇವನೆ ಮಾಡುತ್ತಿದ್ದೇ ಎಂದರೆ ಸರಿಯಲ್ಲ. 8 ನೇ ಆರೋಪಿ ನನ್ನ ಹೆಂಡತಿಗೆ ನಾನು ಮೊದಲು ತೊಂದರೆ ನೀಡಿದಾಗ ಪಂಚಾಯಿತಿ ಆಗಿರುತ್ತದೆ ಎಂದರೆ ಸರಿಯಲ್ಲ. ಸ.ನಂ.163 ನ್ನು ಮತ್ತು ಇತರೇ ಜಮೀನುಗಳನ್ನು ಅಕ್ಬರಸಾಬ ಸಾಗುವಳಿ ಮಾಡುತ್ತಿದ್ದಾನೆ ಎಂದರೆ ಸಾಕ್ಷಿ ಸ.ನಂ.163 ನ್ನು ಮಾತ್ರ ಅಕ್ಬರಸಾಬ ಸಾಗುವಳಿ ಮಾಡುತ್ತಿದ್ದಾನೆ ಎಂದು ನುಡಿಯುತ್ತಾರೆ. ಹನುಮಪೂರು ಗ್ರಾಮದಲ್ಲಿನ ಜಮೀನುಗಳನ್ನು ನನ್ನ ತಮ್ಮ ಮತ್ತು ಅಣ್ಣನ ಮಕ್ಕಳು ಸಾಗುವಳಿ ಮಾಡುತ್ತಾರೆ. ಸದರಿ ಜಮೀನಿನ ಲೀಜಿನ ಹಣ ವರ್ಷಕ್ಕೆ 2 ಲಕ್ಷ ಬರುತ್ತದೆ ಎಂದರೆ ಸರಿ. ಲೀಜಿನ ಹಣ ನೀಡುವಂತೆ ನನ್ನ ಹೆಂಡತಿ ಕೇಳಿದಾಗ ನಾನು ಅವಳ ಜೊತೆ ಜಗಳ ತೆಗೆದು ನಮ್ಮ ಊರಿಗೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಲೀಜಿನ ಹಣವನ್ನು ನಾನೇ ಪಡೆಯುತ್ತೇನೆ ಎಂದರೆ ಸರಿ. ಆರೋಪಿ ಹೊಡೆಯಲು ಬಳಸಿದ ಕಟ್ಟಿಗೆ ಯಾವ ಜಾತಿಯದ್ದು ಎಂದು ನನಗೆ ಹೇಳಲು ಬರುವುದಿಲ್ಲ. ಸದರಿಯಂತಹ ಕಟ್ಟಿಗೆಗಳು ಬೇರೆ ಕಡೆ ಸಿಗುತ್ತವೆ ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ ಕಲ್ಲು ಬೇರೆ ಕಡೆ ಸಿಗುತ್ತವೆ ಎಂದರೆ ಸರಿ. ರಿಮ್ಸ ಆಸ್ಪತ್ರೆಯಲ್ಲಿ ನಾವು ಪ್ರಥಮಿಕ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆ ಕುರಿತು ಹೈದ್ರಾಬಾದಗೆ ಹೋಗಿರುತ್ತೇವೆ. ಹೈದ್ರಾಬಾದಿನಲ್ಲಿ ಚಿಕಿತ್ಸೆ ಪಡೆದ ಆಸ್ಪತ್ರೆಯ ಹೆಸರು ನನಗೆ ಹೇಳಲು ಬರುವುದಿಲ್ಲ. ಹೈದ್ರಬಾದ

ಆಸ್ಪತ್ರೆಯಲ್ಲಿ 2-3 ದಿನಗಳು ಚಿತ್ಸೆ ಪಡೆದಿರತ್ತೇವೆ. ಹೆಂಡತಿ ಮೂಲಕ ಅವಳ ತವರು ಮನೆಯವರಿಗೆ ತೊಂದರೆ ಕೊಡಲು ಸುಳ್ಳು ದೂರು ದಾಖಲು ಮಾಡಿರುತ್ತೇವೆ. ಪಂಚನಾಮೆಗೆ ಬಂದ ಪೋಲಿಸರ ಹಸರರು ಹೇಳಲು ಬರುವುದಿಲ್ಲ. ಸಾಕ್ಷಿ ಮುಂದುವರೆದು ಪಂಚನಾಮೆಗೆ ಪಿ.ಎಸ್.ಐ ಮತ್ತ ಇಬ್ಬರು ಸಿಬ್ಬಂದಿಗಳು ಬಂದಿದ್ದರು. ಪಂಚನಾಮೆ ಕಾಲಕ್ಕೆ ಗ್ರಾಮದವರು ಯಾರು ಇರಲಿಲ್ಲ. ಪಂಚನಾಮೆ ಕಾಲಕ್ಕೆ ಪೋಲಿಸರು, ಪಂಚರು ಮತ್ತು ನಾವು ಇದ್ದೆವು. ಪಂಚರನ್ನು ಗಬ್ಬೂರು ಗ್ರಾಮದಿಂದ ನಾನು ಮತ್ತು ಪೋಲಿಸರು ಕರೆದುಕೊಂಡು ಹೋಗಿರತ್ತೇವೆ. ಗುನ್ಹೆ ಸ್ಥಳದ ಚಕ್ಕಬಂದಿ ಹೇಳಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ನನ್ನ ಹೆಂಡತಿಗೆ ತೊಂದರೆ ಕೊಡಲು ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,

ದೇವದುರ್ಗ.

**CC No.619/2023**

**CW-4 PW-2**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಶಂಶುದ್ದೀನ್ |
| ತಂದೆ/ಗಂಡ | ಃ | ಖಾಜನಾಯಕ |
| ವಯಸ್ಸು | ಃ | 35 |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಹನುಮಪೂರು |
| ಪ್ರಮಾಣಿಕರಿಸಿದ ದಿನಾಂಕ | ಃ | **20-11-2025** |

<u>ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.</u>

ಚಾಸಾ-1 ನನ್ನ ಅಣ್ಣ, ಚಾಸಾ-5 ಮತ್ತು 6 ಅಣ್ಣನ ಮಕ್ಕಳು, ಚಾಸಾ-2, 3 ಮತ್ತು 7 ಗೊತ್ತು. ಆರೋಪಿತರು ಸಂಬಂಧಿಗಳು.

ದಿನಾಂಕ 20.04.2022 ರಂದು ರಾಯಕುಂಪಿ ಗ್ರಾಮದ ಸ.ನಂ.163 ರಲ್ಲಿ ಆರೋಪಿತರು ಕುಂಟೆ ಹೊಡೆಯುತ್ತಿದ್ದಾರೆ ಎಂದು ಚಾಸಾ-7 ರವರು ಬೆಳಿಗ್ಗೆ 11 ಗಂಟೆಗೆ ನನಗೆ ಫೋನ್ ಮಾಡಿದ್ದು ಆಗ ನಾನು ಮತ್ತು ಚಾಸಾ-1, 5 ಮತ್ತು 6 ರವರು ಸ್ಥಳಕ್ಕೆ ಹೋಗಿರುತ್ತೇವೆ. ಆಗ ನಾನು ಮಹ್ಮದ್ ಸಾಬನನ್ನು ಕುಳಿತು ಮಾತನಾಡೋಣ ಅಂತ ಅಂದಾಗ ಮಹ್ಮದ್ ಸಾಬ ನಿಮ್ಮ ಜೊತೆ ಏನು ಮಾತನಾಡುವುದು ಅಂತ 1 ನೇ ಆರೋಪಿ ಸೂಳೇ ಮಕ್ಕಳೇ ಅಂತ ಅವಾಚ್ಯವಾಗಿ ಬೈದು ಕಟ್ಟಿಗೆಯಿಂದ ನನ್ನ ತಲೆಗೆ ಹೊಡೆದು ರಕ್ತಗಾಯ ಮಾಡಿರುತ್ತಾನೆ. 2 ನೇ ಆರೋಪಿ ರಸುಲ ಸಾಬ ಕಲ್ಲಿನಿಂದ ಮೂಗಿಗೆ ಹೊಡೆದು ರಕ್ತ ಗಾಯ ಮಾಡಿರುತ್ತಾನೆ. ನಾನು ಕೆಳಗೆ ಬಿದ್ದಾಗ ಆರೋಪಿತರು ಕಾಲಿನಿಂದ ಒದ್ದಿರುತ್ತಾರೆ. ಇನ್ನೊಂದು ಸಲ ಜಮೀನಿಗೆ ಬಂದರೆ ಜೀವ ತೆಗೆಯುತ್ತೇವೆ ಅಂತ ಜೀವದ ಬೆದರಿಕೆ ಹಾಕಿರುತ್ತಾರೆ. ನಂತರ ಗಬ್ಬೂರು ಆಸ್ಪತ್ರೆಗೆ ಹೋಗಿ ಅಲ್ಲಿಂದ ರಾಯಚೂರಿನ ರಿಮ್ಸ್ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇವೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಹೈದ್ರಾಬಾದ ಆಸ್ಪತ್ರೆಗೆ ಹೋಗಿರುತ್ತೇವೆ. ಅ ಕುರಿತು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಕಲ್ಲು ಮತ್ತು ಕಟ್ಟಿಗೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುಮಾ-1 ಮತ್ತು 2 ಎಂದು ಗುರುತಿಸಲಾಗಿದೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ **SP** ವಕೀಲರಿಂದ

ನನಗೆ ಒದಲು ಬರೆಯಲು ಬರುವುದಿಲ್ಲ. ಚಾಸಾ-7 ಅಕ್ಬರ್ ಸಾಬ ನನಗೆ ಫೋನ್ ಮಾಡಿದಾಗ ನಾನು ಗ್ರಾಮದಲ್ಲಿ ಇದ್ದೆ. ದಿನಾಂಕ 20.04.2022 ರಂದು ಚಾಸಾ-7 ರವರು ನನಗೆ ಫೋನ್ ಮಾಡಿರುತ್ತಾರೆ. ಆಗ ನಾನು ಚಾಸಾ-1, 5 ಮತ್ತು 6 ಸ್ಥಳಕ್ಕೆ ಹೋಗಿರುತ್ತೇವೆ. ಸದರಿ ಜಮೀನು ಸ.ನಂ.163 ಸಣ್ಣ ಶಾಲಂ, ದೊಡ್ಡ ಶಾಲಂ ಮತ್ತು ನನ್ನ ಹೆಸರಿನಲ್ಲಿ ಜಂಟಿಯಾಗಿ ಇರುತ್ತದೆ. ಜಮೀನಿನಲ್ಲಿ 10-12 ಜನ ಇದ್ದರು. ಆರೋಪಿತರನ್ನು ಹೊರತು ಪಡಿಸಿ ಬೇರೆಯವರು ಜಮೀನಿನಲ್ಲಿ ಇದ್ದ ಬಗ್ಗೆ ನಾನು ನೋಡಿರುವುದಿಲ್ಲ. ಸದರಿ ಜಮೀನಿನ ಚಕ್ಬಂದಿ ನನಗೆ ಗೊತ್ತಿಲ್ಲ. ಜಮೀನಿನಲ್ಲಿ ಟ್ರಾಕ್ಟರ ಮೂಲಕ ಕುಂಟೆ ಹೊಡೆಯುತ್ತಿದ್ದರು. ಟ್ರಾಕ್ಟರ ನಂ. ನಾನು ನೋಡಿಲ್ಲ. ಸದರಿ ಟ್ರಾಕ್ಟರ ಮಹ್ಮದ ಸಾಬನಿಗೆ ಸೇರಿತ್ತು. ಮಹ್ಮದಿ ಸಾಬ ಮತ್ತು ರಸೂಲ್ ಸಾಬ ಕಟ್ಟಿಗೆ ಕಲ್ಲಿನಿಂದ ಹೊಡೆದಿರುತ್ತಾರೆ. ಉಳಿದ ಆರೋಪಿತರು ಕೈಯಿಂದ ಹೊಡೆದು ಕಾಲಿನಿದ ಒದ್ದಿರುತ್ತಾರೆ. ಆರೋಪಿತರು ಯಾದಗಿರಿಯ ಕ್ವಾಡಲ್ ಗ್ರಾಮ ಎಂದರೆ ಸರಿ. 8 ನೇ ಆರೋಪಿ ಚಾಸಾ-1 ರವರ ಹೆಂಡತಿ ಎಂದರೆ ಸರಿ. ನನ್ನ ಅಣ್ಣನಿಗೆ 3 ಜನ ಮಕ್ಕಳು ಇರುತ್ತಾರೆ. ಅವರು ಮೊದಲಿನಿಂದಲೂ ತಾಯಿಯ ತವರು ಮನೆಯಲ್ಲಿ ಇದುದ್ದರಿಂದ ವರ ಹೆಸರುಗಳು ನನಗೆ ಗೊತ್ತಿಲ್ಲ. ನನ್ನ ಅಣ್ಣ ಚಾಸಾ-1 ಮದುವೆಯಾದ ನಂತರದಿಂದ ಎಲ್ಲಿ ಇರುತ್ತಿದ್ದ ಎಂಬ ಪ್ರಶ್ನೆಗೆ ಸಾಕ್ಷಿ ಹೆಂಡತಿ ತವರು ಮನೆಯಲ್ಲಿ ಇರುತ್ತಿದ್ದ ಹಾಗೂ ನಮ್ಮ ಊರಿಗೆ ಹೋಗಿ ಬಂದು ಮಾಡುತ್ತಿದ್ದ ಎಂದು ನುಡಿಯುತ್ತಾರೆ. ಚಾಸಾ-1 ನನ್ನ ಅಣ್ಣನಿಗೆ ಸಾರಾಯಿ ಸೇವನೆ ಅಭ್ಯಾಸ ಇರುವುದಿಲ್ಲ. ನಮ್ಮ ಜಮೀನನ್ನು ಲೀಜಿಗೆ ನೀಡಿರುತ್ತೇವೆ ಎಂದರೆ ಸಾಕ್ಷಿ ನಾ 3 ಜನ ಸಹೋದರರು ಜಂಟಿಯಾಗಿ ಸಾಗುವಳಿ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ನನ್ನ ಅಣ್ಣ ನ ಮಕ್ಕಳನ್ನು ಅವರ ತಾಯಿ ಸಾಕುತ್ತಿದ್ದಾಳೆ. ನನ್ನನ್ನು ನನ್ನ ಅಣ್ಣ ಮತ್ತು ಆತನ ಮಕ್ಕಳು ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ರಾಯಚೂರು ಆಸ್ಪತ್ರೆಯಲ್ಲಿ 2 ದಿನಗಳು ಚಿಕಿತ್ಸೆ ಪಡೆದಿರುತ್ತೇನೆ. ಹೈದ್ರಾಬಾದ ಆಸ್ಪತ್ರೆಯಲ್ಲಿ 15-20 ದಿನಗಳು ಚಿಕಿತ್ಸೆ ಪಡೆದಿರುತ್ತೇನೆ. ನಾನು ಗಬ್ಬೂರು ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆ. ಘಟನೆ ನಡೆದ ದಿ 25 ದಿನಗಳ ನಂತರ ಹೇಳಿಕೆ ನೀಡಿರುತ್ತೇನೆ. ಹೇಳಿಕೆ ನೀಡಿದ ದಿನಾಂಕ, ತಿಂಗಳು ಹೇಳಲು ಬರುವುದಿಲ್ಲ. ಸಮಯ ಬೆಳಿಗ್ಗೆ 10 ರಿಂದ 11 ಗಂಟೆ ಆಗಿತ್ತು. ಹೇಳಿಕೆ ನೀಡಲು ಠಾಣೆಗೆ ನಾನು ಬಂದಾಗ ನನ್ನ ಜೊತೆ ಚಾಸಾ-1, 5 ಮತ್ತು 6 ರವರು ಇದ್ದರು. ಚಾಸಾ-5, 6 ರವರ ಹೇಳಿಕೆಯನ್ನು ಪೋಲಿಸರು ನನ್ನ ಸಮಕ್ಷಮ ಪಡೆದಿರುತ್ತಾರೆ. ಆಸ್ಪತ್ರೆಯಿಂದ ಬಂದ ನಂತರ ದೂರನ್ನು ನೀಡಿರುತ್ತೀರಾ ಎಂದರೆ ಸಾಕ್ಷಿ ಮೊದಲೇ ದೂರು ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಮುಮಾ-1 ಮತ್ತು 2 ರಂತಹ ಕಟ್ಟಿಗೆ ಮತ್ತು ಕಲ್ಲು ಬೇರೆ ಕಡೆ ಸಿಗುತ್ತವೆ ಎಂದರೆ ಸರಿ. ಯಾವುದೇ ಘಟನೆ ನಡೆಯದೆ ಇದ್ದರು ಸಹ ಆರೋಪಿತರಿಗೆ ತೊದರೆ

ಕೊಡಲು ಚಾಸಾ-1 ರವರ ಮೂಲಕ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂರದೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ನನ್ನ ಅಣ್ಣನ ಹೆಂಡತಿಗೆ ಮತ್ತ ಅವರು ತವರು ಮನೆಯವರಿಗೆ ತೊಂದರೆ ಕೊಡಲು ಸುಳ್ಳು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ಟ್ರಾಕ್ಟರನ್ನು ಜಪ್ತಿ ಮಾಡಿಕೊಂಡಿಲ್ಲ. ಟ್ರಾಕ್ಟರನಿಂದ ಕುಂಟೆ ಹೊಡೆಯುತ್ತಿದ್ದರು ಎಂದು ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,

ದೇವದುರ್ಗ.

**CC No.619/2023**

**CW-5 PW-3**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಶಾಹಿದ್ |
| ತಂದೆ/ಗಂಡ | ಃ | ದೊಡ್ಡ ಶಾಲಂ |
| ವಯಸ್ಸು | ಃ | 24 |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಹನುಮಪೂರು |
| ಪ್ರಮಾಣಿಕರಿಸಿದ ದಿನಾಂಕ | ಃ | **20-11-2025** |

<u>ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.</u>

ಚಾಸಾ-1 ಮತ್ತು 4 ನನ್ನ ಚಿಕ್ಕಪ್ಪನವರು, ಚಾಸಾ-6 ಅಣ್ಣನ ತಮ್ಮ, ಚಾಸಾ-2, 3 ಮತ್ತು 7 ಗೊತ್ತು. ಆರೋಪಿತರು ಸಂಬಂಧಿಗಳು.

ದಿನಾಂಕ 24.04.2022 ರಂದು ಹಿರೇ ರಾಯಕುಂಪಿ ಗ್ರಾಮದ ಸ.ನಂ.163 ರಲ್ಲಿ ಆರೋಪಿತರು ಕುಂಟೆ ಹೊಡೆಯುತ್ತಿದ್ದಾರೆ ಎಂದು ಚಾಸಾ-7 ರವರು ಬೆಳಿಗ್ಗೆ 11 ಗಂಟೆಗೆ ನನ್ನ ತಂದೆಗೆ ಫೋನ್ ಮಾಡಿದ್ದು ಆಗ ನಾನು ಮತ್ತು ಚಾಸಾ-1, 4 ಮತ್ತು 6 ರವರು ಸ್ಥಳಕ್ಕೆ ಹೋಗಿರುತ್ತೇವೆ. ಆಗ ಚಾಸಾ-1 ರವರು ಏಕೆ ಕುಂಟೆ ಹೊಡೆಯುತ್ತೀರಿ ಅಂತ ಕೇಳಿದ್ದಕ್ಕೆ ಮಹ್ಮದ್ ಸಾಬ ನಮಗೂ ಜಮೀನಿನಲ್ಲಿ ಭಾಗ ಬರಬೇಕು ಎಂದು ಮಾತಿನ ಜಗಳ ನಡೆದಿದ್ದು ನಂತರ ಸ್ಥಳದಲ್ಲಿ ಬಿದಿದ್ದ ಕಟ್ಟಿಗೆಯನ್ನು ತೆಗೆದುಕೊಂಡು ಮಹ್ಮದ್ ಸಾಬ ಚಾಸ-4 ರವರಿಗೆ ತಲೆಗೆ ಹೊಡೆದು ರಕ್ತಗಾಯ ಮಾಡಿರುತ್ತಾನೆ. 2 ನೇ ಆರೋಪಿ ರಸೂಲ್ ಸಾಬ ಕಲ್ಲಿನಿಂದ ಮೂಗಿಗೆ ಹೊಡೆದು ರಕ್ತ ಗಾಯ ಮಾಡಿರುತ್ತಾನೆ. ಉಳಿದ ಆರೋಪಿತರು ಕೈಯಿಂದ ಹೊಡೆದು ಕಾಲಿನಿಂದ ಒದ್ದಿರುತ್ತಾರೆ. ನಮ್ಮ ತಂಟೆಗೆ ಬಂದರೆ ಜೀವ ಸಹಿತ ಬಿಡುವುದಿಲ್ಲ ಅಂತ ಜೀವದ ಬೆದರಿಕೆ ಹಾಕಿರುತ್ತಾರೆ. ನಂತರ ಗಬ್ಬೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ರಾಯಚೂರಿನ ರಿಮ್ಸ್ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇವೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಹೈದ್ರಾಬಾದ ಆಸ್ಪತ್ರೆಗೆ ಹೋಗಿರುತ್ತೇವೆ. ಚಿಕಿತ್ಸೆ ಪಡೆದ ನಂತರ ಠಾಣೆಗೆ ಬಂದು ದೂರು ನೀಡಿರುತ್ತೇವೆ. ಆ ಕುರಿತು ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಕಲ್ಲು ಮತ್ತು ಕಟ್ಟಿಗೆಯನ್ನು ಸಾಕ್ಷಿ ನೋಡಿ

ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುಮಾ-1 ಮತ್ತು 2 ಎಂದು ಗುರುತಿಸಲಾಗಿದೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ **SP** ವಕೀಲರಿಂದ

ನಾನು ದ್ವಿತಿಯ ಪಿಯುಸಿ ಓದಿರುತ್ತೇನೆ. ಸಣ್ಣ ಶಾಲಂ ಮತ್ತು 8 ನೇ ಆರೋಪಿ ಗಂಡ ಹೆಂಡತಿ ಎಂದರೆ ಸರಿ. ನನನ ಚ್ಕಿಕ್ಕಪ್ಪನಿಗೆ 3 ಜನ ಮಕ್ಕಳು ಇರುತ್ತಾರೆ. ಚಾಸಾ-1 ಮದುವೆಯಾದಗಿನಿಂದ 8-10 ವರ್ಷಗಳ ವರೆಗೆ 8 ನೇ ಆರೋಪಿ ಮನೆಯಲ್ಲಿ ಇದ್ದರು ಎಂದರೆ ಸರಿ. ಚಾಸಾ-1 ಸಾರಾಯಿ ಸೇವನೆ ಮಾಡುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ರವರ ಜಮೀನನು ಎಲ್ಲರೂ ಸೇರಿ ಸಾಗುವಳಿ ಮಾಡುತ್ತೇವೆ. ಚಾಸಾ-1 ತನ್ನ ಜಮೀನನ್ನು ನಮಗೆ ಲೀಜಿಗೆ ನೀಡಿರುತ್ತಾನೆ. ಚಾಸಾ-7 ನನ್ನ ತಂದೆಗೆ ಫೋನ್ ಮಾಡಿದಾಗ ನಾನು ಊರಿನಲ್ಲಿ ಇದ್ದೆ. ನಾನು ಅಲ್ಲಿಗೆ ಹೋದಾಗ ಹಿರೇ ರಾಯಕುಂಪಿ ಗ್ರಾಮದವರು ಯಾರು ಇರಲಿಲ್ಲ ಆರೋಪಿಗಳು ಮಾತ್ರ ಇದ್ದರು. 8 ನೇ ಆರೋಪಿ ನಮಗೆ ಜಮೀನಿನ ಲೀಜ್ ಹಣ ನೀಡುವಂತೆ ಕೇಳಿದ್ದಳು ಎಂದರೆ ಸರಿ. ಸದರಿ ಲೀಜಿನ ಹಣವನ್ನು ನಾವು ಚಿಕ್ಕಪ್ಪನಿಗೆ ನೀಡುತ್ತೇವೆ ನಿಮಗೆ ನೀಡುವುದಿಲ್ಲ ಅಂತ ಹೇಳಿರುತ್ತೇವೆ ಎಂದರೆ ಸರಿ. ಚಾಸಾ-1 ರವರ ಹೆಂಡತಿ ತವರು ಮನೆಯವರಿಗೆ ತೊಂದರೆ ಕೊಡಲು ಯಾವುದೇ ಜಗಳ ನಡೆಯದಿದ್ದರೂ 1 ಮತ್ತು 2 ನೇ ಆರೋಪಿತರು ಕಟ್ಟಿಗೆ ಮತ್ತು ಕಲ್ಲಿನಿಂದ ಚಾಸಾ-4 ರವರಿಗೆ ಹೊಡೆದು ರಕ್ತ ಗಾಯ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಲಯದ ಮುಂದೆ ಇರುವ ಮುಮಾ-1 ಮತ್ತು 2 ರಂತಹವು ಬೇರೆ ಕಡೆ ಸಿಗುತ್ತವೆ ಎಂದರೆ ಸರಿ. ರಾಯಚೂರು ಆಸ್ಪತ್ರೆಯಲ್ಲಿ 2 ದಿನ ಇದ್ದೆವು. ಹೈದ್ರಾಬಾದ ಆಸ್ಪತ್ರೆಯಲ್ಲಿ 4-5 ದಿನಗಳು ಚಿಕಿತ್ಸೆ ಪಡೆದಿರುತ್ತೇವೆ. ಹೈದ್ರಾಬಾದ ಆಸ್ಪತ್ರೆ ಹೆಸರು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪನ ಹೆಂಡತಿಗೆ ಮತ್ತು ಅವರು ತವರು ಮನೆಯವರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.